
## ಅಂಗೈಯಲ್ಲಿ ಅರಮನೆ

### ಸಮಾನಾರ್ಥ ಪದಗಳು

ಬೇಸಿಗೆ ರಜೆಗೆ ಮೊಮ್ಮಕ್ಕಳು ಮನೆಗೆ ಬಂದಿದ್ದರು. ಒಂದು ಸಂಜೆ ಅವರಿಗಾಗಿ ಕೊಬ್ಬರಿ ಮಿಠಾಯಿ ಮಾಡುತ್ತಿದ್ದೆ. ಅಷ್ಟರಲ್ಲಿ ಕಾಲಿಂಗ್ ಬೆಲ್ ಶಬ್ದವಾಯಿತು. ಎಂಟು ವರ್ಷದ ಮೊಮ್ಮಗಳಿಗೆ, 'ಯಾರು ಬಂದರು ನೋಡು. ಬಾಗಿಲು ತೆಗಿ' ಎಂದೆ. ಬಾಗಿಲು ತೆಗೆದು ಬಂದವಳೇ, 'ಅಜ್ಜೀ ಹಾಸತ್ತೆ ಬಂದಿದ್ದಾರೆ. ಒಳಗೆ ಕೂರಿಸಿದ್ದೀನಿ' ಎಂದಳು. ನಾನು ಆಶ್ಚರ್ಯದಿಂದ ಇದ್ಯಾರು... ನನಗೆ ಗೊತ್ತಿಲ್ಲದ ಹಾಸತ್ತೆ ಯಾರಿರಬಹುದು ಎಂದುಕೊಂಡು ಗಾಬರಿಯಿಂದ ಸ್ಟೌ ಆಫ್ ಮಾಡಿ ಬಂದು ನೋಡಿದೆ. ನನ್ನ ಗೆಳತಿ ವಿನೋದ ಕುಳಿತಿದ್ದಳು. ಆಶ್ಚರ್ಯದಿಂದ 'ಏನ್ರೀ... ವಿನೋದ ನಿಮ್ಮ ಜೊತೆ ಯಾರು ಬಂದರು? ಅದ್ಯಾರೋ ಹಾಸತ್ತೆ ಅಂತ ನನ್ನ ಮೊಮ್ಮಗಳು ಹೇಳಿದಳು?' ಅಂದಾಗ ಅಲ್ಲಿಯೇ ಇದ್ದ ನನ್ನ ಮೊಮ್ಮಗಳು, 'ಇವರಿಗೇ ಅಜ್ಜಿ ನಾನು ಹೇಳಿದ್ದು... ನಾನು ಕನ್ನಡ ವ್ಯಾಕರಣದ ಸಮಾನಾರ್ಥ ಪದಗಳನ್ನು ಓದುತ್ತಿದ್ದೆ. ವಿನೋದ ಅಂದರೆ ಹಾಸ್ಯ ಅಲ್ಲವಾ ಅದಕ್ಕೆ ವಿನೋದ ಅತ್ತೆಗೆ ಹಾಸ್ಯತ್ತೆ (ಹಾಸತ್ತೆ) ಅಂತ ಹೇಳಿದೆ' ಅಂದಾಗ ಈ ಆಂಗ್ಲ ಮಾಧ್ಯಮದ ಮಕ್ಕಳ ಕನ್ನಡದ ಅರೆಬರೆ ಜ್ಞಾನ ನೋಡಿ ನಗುವಂತಾಯಿತು.



**ಜಯಮಾಲಾ ಪೈ**

### ಸ್ವಂತ!



ಯಾವಾಗಲೂ ಯಾರಾದರೂ ಸಂಬಂಧಿಕರು ಪರಸ್ಪರ ಸಿಕ್ಕಾಗ, 'ಇವರ ಅವರ ಸ್ವಂತ ಅಕ್ಕ', 'ಅವರು ಇವರ ಸ್ವಂತ ಅಣ್ಣ' ಅಂತೆಲ್ಲಾ ಪರಿಚಯಿಸುವುದನ್ನು ಗಮನವಿಟ್ಟು ನೋಡುತ್ತಿದ್ದ ಪುಟಾಣಿ ಒಂದಿನ ಅಮ್ಮ–ಅಪ್ಪನ ಜೊತೆ ವಾಕಿಂಗ್ ಹೋಗ್ತಿದ್ದಳು. ದಾರಿಯಲ್ಲಿ ತನ್ನ ಅಪ್ಪನ ಜೊತೆ ಕೆಲಸ ಮಾಡುವ ಸಹೋದ್ಯೋಗಿಯೊಬ್ಬರು ಎದುರಾದರು. ಅಪ್ಪ ಅವರನ್ನು ಪತ್ನಿಗೆ ಪರಿಚಯ ಮಾಡಿ ಕೊಡ್ತ, 'ಇವರು ನಮ್ ಕೊಲೀಗ್ ಸುರೇಶನ ಹೆಂಡ್ತಿ' ಅಂದ ತಕ್ಷಣ, ಪುಟಾಣಿ, 'ಸ್ವಂತನಾ?' ಅಂತ ಕೇಳಿ ಬಿಟ್ಟು. ಆ ಹೆಣ್ಮಕ್ಕಳಿಬ್ರೂ ಪರಿಚಯ ಮಾಡಿಕೊಳ್ಳೋದೂ ಬಿಟ್ಟು ಅವಾಕ್ಕಾಗಿ ನಿಂತು ಬಿಟ್ರು.

**ಜ್ಯೋತಿ ರಾಜೇಶ್**